

بسم اللہِ الرّحمٰن الرّحیم

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ನೀತಿಪಾಠಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 30–10–2015 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಘಟನೆಗಳು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಕೆಲವು ನೀತಿಕಥೆಗಳನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತನ್ನ ವಿವಿಧ ಭಾಷಣಗಳಲ್ಲಿ ಪ್ರಸ್ತಾಪಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಈ ದಿನ ನಿಮ್ಮ ಮುಂದೆ ಇರಿಸುವೆನು. ಇವುಗಳು ಬೇರೆ ಬೇರೆ ಸ್ಥಳಗಳಿಂದ ಆಯ್ದ ಭಾಗಗಳಾಗಿವೆ. ಪ್ರತಿಯೊಂದು ಘಟನೆ ಮತ್ತು ನೀತಿಕಥೆಗಳು ಒಂದು ನೈತಿಕ ಪಾಠವನ್ನು ಸೂಚಿಸುತ್ತದೆ. ಈ ವಿಷಯವನ್ನು ಗಮನಿಸಿ ನಮ್ಮ ಜಮಾಅತಿನ ಜನರು ತಮ್ಮ ಜ್ಞಾನವನ್ನು ವರ್ಧಿಸಬೇಕು. ಧಾರ್ಮಿಕ ಜ್ಞಾನ ಹೊಂದಿರುವವರು ಸಹ ಈಗಿನ ಲೋಕದ ಸ್ಥಿತಿಯ ಬಗ್ಗೆ ಅರಿತುಕೊಳ್ಳಬೇಕು ಮತ್ತು ಚರಿತ್ರೆಯನ್ನು ಸಹ ಅಧ್ಯಯನ ಮಾಡಬೇಕು. ವಿಶಿಷ್ಟವಾಗಿ ಮುಬಲ್ಲಿಗರೂ ಮುರಬ್ಬಿಗಳೂ ಹೀಗೆ ಮಾಡಬೇಕಾಗಿದೆ. ಅವರು ಇದರ ಬಗ್ಗೆ ವಿಶಿಷ್ಟವಾಗಿ ಗಮನಿಸಬೇಕು. ಇಂದಿನ ಕಾಲದಲ್ಲಿ ಮಾಹಿತಿಗಳು ಬಹಳ ಸುಲಭವಾಗಿ ತಕ್ಷಣ ಲಭಿಸುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಒಂದು ನೀತಿಕಥೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸಿದ್ದಾರೆ. ಅದು ಜ್ಞಾನವನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಲಕ್ಷ್ಯ ನೀಡುವಂತೆ ಮಾಡುತ್ತದೆ. ಆ ನೀತಿಕಥೆ ಹೀಗಿದೆ: ಒಬ್ಬನು ಬಹಳ ದೊಡ್ಡ ಧಾರ್ಮಿಕ ಹಿರಿಯವನು ಎಂದು ಪ್ರಸಿದ್ಧನಾಗಿದ್ದನು. ಒಬ್ಬ ದೊರೆಯ ಮಂತ್ರಿ ಆ ಹಿರಿಯ ವ್ಯಕ್ತಿಯ ಅನುಯಾಯಿಯಾದನು. ಅವನು ದೊರೆಯೊಂದಿಗೆ ಹೇಳಿದನು– "ನೀವು ಆ ಧಾರ್ಮಿಕ ಮಹಾಪುರುಷರನ್ನು ಆವಶ್ಯಕವಾಗಿ ಭೇಟಿಯಾಗಿರಿ" ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಆ ವ್ಯಕ್ತಿ ಧಾರ್ಮಿಕವಾಗಿ ಮಹತ್ತರ ಸ್ಥಾನ ಪಡೆದಿದ್ದನೋ ಇಲ್ಲವೋ ಎಂದು ತಿಳಿಯದು. ಆದರೆ ಮುಂದಿನ ಘಟನೆಗಳಿಂದ ಆ ಮನುಷ್ಯ ನಿಶ್ಚಯವಾಗಿಯೂ ಅಜ್ಞಾನಿಯಾಗಿದ್ದ ಎಂದು ತಿಳಿದು ಬರುತ್ತದೆ. ದೊರೆ ಆ ಧಾರ್ಮಿಕ ಮಹಾಪುರುಷನನ್ನು ಸಂದರ್ಶಿಸಿದಾಗ ಆತ ದೊರೆಯೊಂದಿಗೆ ಹೇಳಿದನು: "ಬಹುಮಾನ್ಯರಾದ ರಾಜನೇ, ನೀವು ನ್ಯಾಯ ನಿಷ್ಠರಾಗಿರಬೇಕು. ಮುಸ್ಲಿಮರಲ್ಲಿ ಗತಿಸಿಹೋದ ಸಿಕಂದರ್ ಬಾದ್‌ಶಾ ಎಷ್ಟು ನ್ಯಾಯ ನಿಷ್ಠರಾಗಿದ್ದರು. ಇಂದಿನ ತನಕ ಅವರ ಕೀರ್ತಿ ಉಳಿದಿದೆ" ಎಂದು ಹೇಳಿದರು. ವಾಸ್ತವದಲ್ಲಿ ಸಿಕಂದರ್ ಎಂಬ ದೊರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಕ್ಕಿಂತಲೂ ನೂರಾರು ವರ್ಷಗಳ ಹಿಂದೆ ಮಾತ್ರವಲ್ಲ ಹಝ್ರತ್ ಈಸಾ ಅಲೈಹಿಸ್ಸಲಾಮರಿಗಿಂತ ಹಿಂದೆ ಆಡಳಿತೆ ನಡೆಸಿದವರಾಗಿದ್ದರು. ಆದರೆ ಆ ಹಿರಿಯ ವ್ಯಕ್ತಿ ಸಿಕಂದರ್ ಬಾದಶಹರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಆಡಳಿತೆ ನಡೆಸಿದ ಮುಸ್ಲಿಮ್ ದೊರೆ ಎಂದು ಹೇಳಿದನು. ಆತನ ಮಾತಿನ ಪ್ರಭಾವ ದೊರೆಯ ಮೇಲೆ ಉಂಟಾಯಿತು. ದೊರೆಗೆ ಆ ಮನುಷ್ಯನ ಹಿರಿತನದ ಬಗ್ಗೆ ತೀವ್ರ ಸಂದೇಹ ಉಂಟಾಯಿತು. ಅವರು ಕೂಡಲೆ ಅಲ್ಲಿಂದ ಎದ್ದು ಹೋದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಧಾರ್ಮಿಕ ಹಿರಿಯರು ಚರಿತ್ರೆ ಕಲಿಯಬೇಕೆಂಬ ಶರತ್ತೇನೂ ಇಲ್ಲ. ಆದರೆ ಈ ಸ್ವಯಂ ಘೋಷಿತ ಸಂತನು ವಿಪತ್ತನ್ನು ತಾನೇ ತನ್ನ ಮೇಲೆ ಎಳೆದು ಹಾಕಿದನು. ಮನುಷ್ಯನು ಸತ್ಯದಿಂದ ದೂರ ಸರಿದು ಧಾರ್ಮಿಕ ಹಿರಿತನ ಮತ್ತು ಜ್ಞಾನದ ನಿಲುವಂಗಿಯನ್ನು ಸ್ವತಃ ಧರಿಸಲು ಪ್ರಯತ್ನಿಸುವಾಗ ಈ ರೀತಿ ಅಪಮಾನಿತನಾಗಿ ಹೀನೈಸಲ್ಪಡುತ್ತಾನೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಜನರು ಅನ್ಯರ ವಿರುದ್ಧ ಕೆಡುಕುಂಟಾಗಲಿ ಎಂದು ಪ್ರಾರ್ಥಿಸುವುದರ ಬಗ್ಗೆ ಬಹಳ ಆತುರ ಪಡುತ್ತಾರೆ. ನಾವು ಯಾರ ವಿರುದ್ಧ ಸಹ ಕೆಡುಕುಂಟಾಗಲಿ ಎಂದು ಪ್ರಾರ್ಥಿಸಬಾರದು ಎನ್ನುವುದು ನಮ್ಮ ತತ್ವವಾಗಿದೆ. ನಾವು ನಮ್ಮ ಶತ್ರುಗಳ ಪರವಾಗಿ ಸಹ ಪ್ರಾರ್ಥಿಸಬೇಕು. ಸತ್ಯವಿಶ್ವಾಸಕ್ಕೆ ಬರಬೇಕಾಗಿರುವುದು ಅವರೇ ತಾನೆ. ಮೌಲವಿ ಅಬ್ದುಲ್ ಕರೀಮ್ ಸಾಹೇಬ್ ಹೀಗೆ ಹೇಳುತ್ತಿದ್ದರು– ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಾಸಿಸುತ್ತಿದ್ದ ಕೋಣೆಯ ಮೇಲ್ಭಾಗದ ಕೋಣೆಯಲ್ಲಿ ವಾಸಿಸುತ್ತಿದ್ದೆ. ರಾತ್ರಿ ನನ್ನ ಕೋಣೆಯ ಕೆಳಗಿರುವ ಕೋಣೆಯಿಂದ ಅಳುವ ಶಬ್ದ ಕೇಳಿಸಿತು. ಮಹಿಳೆ ಪ್ರಸವವೇದನೆಯಿಂದ ಬೊಬ್ಬಿಟ್ಟು ಅಳುತ್ತಿರುವ ಹಾಗೆ. ನನಗೆ ಆಶ್ಚರ್ಯವಾಯಿತು. ನಾನು ಕಿವಿಗೊಟ್ಟು ಆಲಿಸಿದೆ. ಆಗ ನನಗೆ ತಿಳಿಯಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರಾರ್ಥಿಸುತ್ತಿದ್ದಾರೆಂದು. ಅವರು ಹೀಗೆ ಪ್ರಾರ್ಥಿಸುತ್ತಿದ್ದರು: ಓ ಅಲ್ಲಾಹ್, ಪ್ಲೇಗ್ ರೋಗ ಹಬ್ಬಿದೆ. ಜನರು ಈ ರೋಗ ಬಾಧಿತರಾಗಿ ಸಾಯುತ್ತಿದ್ದಾರೆ. ಓ ಅಲ್ಲಾಹ್, ಈ ಜನರೆಲ್ಲರೂ ಸತ್ತು ಹೋದರೆ ನಿನ್ನನ್ನು ನಂಬುವವರಾಗಿ ಯಾರು ಉಳಿಯುತ್ತಾರೆ. ನೋಡಿರಿ, ಪ್ಲೇಗ್ ಎಂತಹ ದೃಷ್ಟಾಂತವಾಗಿತ್ತು ಎಂದರೆ ಅದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಭವಿಷ್ಯ ನುಡಿದಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನುಡಿದ ಭವಿಷ್ಯವಾಣಿಗಳಲ್ಲೂ ಅದರ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಆದರೆ ಪ್ಲೇಗ್ ರೋಗ ಹಬ್ಬಿದಾಗ ಯಾರ ಸತ್ಯತೆಗೆ ಸಾಕ್ಷ್ಯಾಧಾರವಾಗಿ ಪ್ಲೇಗ್ ರೋಗ ಹಬ್ಬಿತೋ ಅವರೇ ಅಲ್ಲಾಹನ ಮುಂದೆ ಹೃದಯ ವಿದ್ರಾವಕವಾಗಿ ಪ್ರಾರ್ಥಿಸುತ್ತಾರೆ: "ಓ ಅಲ್ಲಾಹ್, ಈ ಜನರೆಲ್ಲಾ ಸತ್ತು ಹೋದರೆ ನಿನ್ನನ್ನು ನಂಬುವವರು ಯಾರು?" ಎಂದು. ಆದುದರಿಂದ ಸತ್ಯವಿಶ್ವಾಸಿಗಳು ಜನ ಸಾಮಾನ್ಯರ ವಿರುದ್ಧ ಕೆಡುಕುಂಟಾಗಲಿ ಎಂದು ಪ್ರಾರ್ಥಿಸಬಾರದು. ಯಾವ ಜನರನ್ನು ಉನ್ನತ ಆಧ್ಯಾತ್ಮಿಕ ಸ್ಥಾನಕ್ಕೆ ತಲಪಿಸಲು ನಮ್ಮನ್ನು ನಿಯೋಜಿಸಲಾಗಿದೆಯೋ ಅಂತಹ ಜನರ ವಿರುದ್ಧ ನಾವು ಹೇಗೆ ತಾನೆ ಅವರಿಗೆ ಕೆಟ್ಟದಾಗಲಿ ಎಂದು ಪ್ರಾರ್ಥಿಸಲು ಸಾಧ್ಯ.?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಫಾರ್ಸಿ ಪದ್ಯದಲ್ಲಿ ಹೀಗೆ ಹೇಳಿದ್ದಾರೆ:

**ಅಯೆ ದಿಲ್ ತೂ ನೇಝ್ ಖಾತಿರ್ ಏನಾಂ ನಿಗಾಹ್‌ದಾರ್**
**ಕಾಖರ್ ಕುನಂದ್ ದಅವಯೆ ಹುಬ್ಬೆ ಪೈಯಂಬರಿ.**

"ಓ ನನ್ನ ಹೃದಯವೇ, ನೀನು ಆ ಜನರ ಯೋಚನೆಗಳನ್ನೂ, ಭಾವನೆಗಳನ್ನೂ ಲಕ್ಷ್ಯದಲ್ಲಿರಿಸು. ಅವರ ಹೃದಯ ಕೊಳಕಾಗದಂತೆ ಗಮನಿಸು. ನೀನು ಕಂಗೆಟ್ಟು ಅವರ ವಿರುದ್ಧ ಕೆಡುಕನ್ನು ಹಾರೈಸುವ ಪ್ರಾರ್ಥನೆ ಮಾಡದಿರು.

ಈ ಜನರು ನಿನ್ನ ಪ್ರಿಯರಾದ ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವವರಾಗಿದ್ದಾರೆ. ಈ ಪ್ರೀತಿಯ ಕಾರಣದಿಂದಲೇ ಅವರು ನಿನ್ನನ್ನು ಬೈಯುತ್ತಾ ಇದ್ದಾರೆ.''

ಜನ ಸಾಮಾನ್ಯರು ತಿಳುವಳಿಕೆಯಿಲ್ಲದವರಾಗಿದ್ದಾರೆ. ಅವರಿಗೆ ಮೌಲವಿಗಳು ಕಲಿಸುತ್ತಾರೆ. ಮೌಲವಿಗಳು ಹೇಳಿದ ಹಾಗೆ ಈ ಜನರು ಆಡುತ್ತಾರೆ. ನಾವು ಹೇಗೆ ಪ್ರಾರ್ಥಿಸಬೇಕೆಂದರೆ ಅಲ್ಲಾಹನು ಮುಸ್ಲಿಮ್ ಸಮುದಾಯವನ್ನು ಕೆಟ್ಟ ಮತ ಪಂಡಿತರಿಂದ ಮತ್ತು ತಪ್ಪುಗಾರರಾದ ನಾಯಕರಿಂದ ರಕ್ಷಿಸಲಿ ಮತ್ತು ಜನಸಮಾನ್ಯರಿಗೆ ಸಲ್ಲಬೇಕಾದ ಹಕ್ಕುಗಳು ಅವರಿಗೆ ದೊರಕುವಂತಾಗಲಿ ಎಂದು ಪ್ರಾರ್ಥಿಸಬೇಕು. ಹರ್ಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಸತ್ಯಸಂಧನಾದ ಮುಸ್ಲಿಮನು ಕಷ್ಟಗಳಿಗೂ ವಿಪತ್ತುಗಳಿಗೂ ಪಾತ್ರನಾಗುವುದು ವಿಧಿಸಲ್ಪಟ್ಟಿದೆ. ಅನಂತರ ಅಲ್ಲಾಹನು ಅವನಿಗೆ ಉತ್ತಮ ಸ್ಥಿತಿ ಉಂಟಾಗುವಂತೆ ಮಾಡುತ್ತಾನೆ. ಹರ್ಝ್‌ರತ್ ಮೌಲಾನ ರೂಮೀ ಹೀಗೆ ಒಂದು ಪದ್ಯದಲ್ಲಿ ಹೇಳಿದ್ದಾರೆ:

**ಹರ್ ಬಲಾ ಕೀಂ ಈಂ ಖೌಮ್ ರಾ ಊದಾದ ಅಸ್ತ್**
**ಝೇರ್ ಆಂ ಎಕ್ ಗನ್‌ಜ್‌ಹಾ ಬನಿಹಾದ ಅಸ್ತ್.**

ಅಲ್ಲಾಹನು ಈ ಸಮುದಾಯದ ಮೇಲೆ ಏನೆಲ್ಲಾ ಕಷ್ಟ ಇಳಿಸಿದನೋ ಅದರ ಕೆಳಗೆ ಬಹಳ ದೊಡ್ಡ ಖಜಾನೆ ಇರಿಸಿರುತ್ತಾನೆ.

ಹರ್ಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಮೌಲಾನ ರೂಮಿಯವರ ಮೇಲಿನ ಪದ್ಯವನ್ನು ಯಾವಾಗಲೂ ಉಲ್ಲೇಖಿಸುತ್ತಾ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಿದ್ದರು: ಯಾವುದಾದರೂ ಸಮುದಾಯ ಅಥವಾ ಜಮಾಅತ್ ವಾಸ್ತವಿಕವಾಗಿಯೂ ಮುಸ್ಲಿಮ್ ಆಗಿದ್ದರೆ ಅವರ ಎಲ್ಲ ಕಷ್ಟಗಳು ಮತ್ತು ಅಪಾಯಗಳು ನಿವಾರಣೆಗೊಂಡು ಅವರಿಗೆ ಅಭಿವೃದ್ಧಿ ಲಭಿಸುವುದು. ಇದು ಸತ್ಯವನ್ನು ಅಳೆಯಬಲ್ಲ ಬಹಳ ದೊಡ್ಡ ಒಂದು ಅಳತೆಗೋಲು ಆಗಿದೆ– ಕಷ್ಟದ ನಂತರ ಸುಖ ಸಿಗುತ್ತದೆ ಎಂಬುದು. ಅಹ್ಮದಿಯಾ ಜಮಾಅತಿನ ಚರಿತ್ರೆ ಇದಕ್ಕೆ ಸಾಕ್ಷ್ಯ ನೀಡುತ್ತದೆ. ಪ್ರತಿಯೊಂದು ಪರೀಕ್ಷೆಯ ಘಟ್ಟದ ನಂತರ ಅಲ್ಲಾಹನ ಅನುಗ್ರಹದಿಂದ ನಮಗೆ ಅಭಿವೃದ್ಧಿಯು ಲಭಿಸುತ್ತಿದೆ.

ಹರ್ಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಕೆಟ್ಟ ಯೋಚನೆಗಳ ಪ್ರಭಾವ, ಬಾಹ್ಯವಾಗಿ ಕಾಣಿಸದಿದ್ದರೂ ಕೆಟ್ಟ ಯೋಚನೆಗಳನ್ನು ಹೊಂದಿದ ವ್ಯಕ್ತಿಯ ಸಮೀಪ ಕುಳಿತಿರುವುದರಿಂದಲೂ ಅದು ಉಂಟಾಗುತ್ತದೆ. ಒಬ್ಬ ಕೆಟ್ಟ ವ್ಯಕ್ತಿಯೊಂದಿಗೆ ಸಮೀಪವಾಗಿರುವಾಗ ಒಳ್ಳೆಯ ವ್ಯಕ್ತಿಯ ಮೇಲೆ ಸಹ ಕೆಟ್ಟ ವ್ಯಕ್ತಿಯ ಪ್ರಭಾವ ತಿಳಿಯದೆ ತಾನಾಗಿ ಸಂಭವಿಸುತ್ತದೆ. ಇದರ ಬಗ್ಗೆ ಒಂದು ಉದಾಹರಣೆಯನ್ನು ಹೀಗೆ ವಿವರಿಸಿ ದ್ದಾರೆ: ಒಬ್ಬ ಸಿಖ್ ವಿದ್ಯಾರ್ಥಿ ಸರಕಾರಿ ಕಾಲೇಜಿನಲ್ಲಿ ಕಲಿಯುತ್ತಿದ್ದನು. ಅವನು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ನಿಷ್ಠೆಯ ಸಂಬಂಧ ಹೊಂದಿದ್ದನು. ಅವನು ಒಮ್ಮೆ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಹೀಗೆ ತಿಳಿಸಿದನು: 'ನನಗೆ ಮೊದಲು ದೇವನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸವಿತ್ತು. ಆದರೆ ಈಗ ನನಗೆ ಅದರ ಬಗ್ಗೆ ಸಂದೇಹಗಳು ತಲೆದೋರುತ್ತಿವೆ.' ಆಗ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವನಿಗೆ ತಿಳಿಸಿದರು: 'ನೀನು ಕ್ಲಾಸ್ ರೂಮಿನಲ್ಲಿ ಈಗ ಕುಳಿತುಕೊಳ್ಳುತ್ತಿರುವ ಸ್ಥಳವನ್ನು ಬದಲಾಯಿಸು.' ಆ ವಿದ್ಯಾರ್ಥಿ ತಾನು ಕುಳಿತುಕೊಳ್ಳುವ ಸ್ಥಳ ಬದಲಾಯಿಸಿದನು. ಕೆಲವೇ ದಿವಸದ ನಂತರ ಆತ ಈಗ ನನಗೆ ದೇವನ ಅಸ್ತಿತ್ವದ ಬಗ್ಗೆ ಸಂದೇಹಗಳಿಲ್ಲ ಎಂದು ಹೇಳಿದನು. ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು: ಆ ವಿದ್ಯಾರ್ಥಿಯ ಸಮೀಪ ಒಬ್ಬ ನಾಸ್ತಿಕ ವಿದ್ಯಾರ್ಥಿ ಕುಳಿತು ಕೊಳ್ಳುತ್ತಿದ್ದನು. ಅವನ ಚಿಂತನೆಗಳ ಪ್ರಭಾವ ಈ ಸಿಖ್ ವಿದ್ಯಾರ್ಥಿಯ ಮೇಲೆ ಉಂಟಾಗುತ್ತಿತ್ತು. ಸಿಖ್ ವಿದ್ಯಾರ್ಥಿ ತನ್ನ ಆಸನ ಬದಲಾಯಿಸಿದಾಗ ನಾಸ್ತಿಕ ವಿದ್ಯಾರ್ಥಿಯ ಪ್ರಭಾವ ನಿವಾರಣೆಯಾಯಿತು. ಅವನ ಸಂಶಯಗಳು ಸಹ ದೂರವಾದವು.

ಈಗಿನ ಕಾಲದಲ್ಲಿ ಟಿ.ವಿ. ಕಾರ್ಯಕ್ರಮಗಳ ಬಗ್ಗೆ ದೊಡ್ಡವರು ನೆನಪಿಡಬೇಕು. ಮಕ್ಕಳ ಸ್ವಭಾವ ಗುಣಗಳ ಮೇಲೆ ಕೆಟ್ಟ ಪ್ರಭಾವ ಉಂಟು ಮಾಡುವಂತಹ ಕಾರ್ಯಕ್ರಮಗಳನ್ನು ಮಕ್ಕಳು ನೋಡದಂತೆ ನಿಗಾವಹಿಸಬೇಕಾದುದು ದೊಡ್ಡವರ ಕರ್ತವ್ಯವಾಗಿದೆ. ತಂದೆ ತಾಯಂದಿರು ತಮ್ಮ ಮನೆಯ ಪರಿಸರವನ್ನು ಸ್ವಚ್ಛವಾಗಿಡಲು ಪ್ರಯತ್ನ ಮಾಡಬೇಕಾದುದು ಅವರ ಕಡ್ಡಾಯ ಕರ್ತವ್ಯ ಆಗಿದೆ. ಮಕ್ಕಳ ಮೇಲೆ ಕೆಟ್ಟ ಪ್ರಭಾವ ಉಂಟಾಗದಂತೆ ಮತ್ತು ಅವರ ತರಬೇತಿಗೆ ಹಾನಿ ಉಂಟಾಗದಂತೆ ನೋಡಿಕೊಳ್ಳಬೇಕು.

ಹರ್ಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹ್ ಅನ್‌ಹು ಒಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ: ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೆಲವರೊಂದಿಗೆ ಹೇಳುತ್ತಿದ್ದರು– ಒಬ್ಬನ ಪರವಾಗಿ ಪ್ರಾರ್ಥನೆ ಮಾಡಲು ಆ ವ್ಯಕ್ತಿಯೊಂದಿಗೆ ಒಂದು ನಿಕಟ ಸಂಬಂಧವೇರ್ಪಡಬೇಕಾದ ಆವಶ್ಯಕತೆ ಇದೆ. ಆದುದರಿಂದ ಪ್ರಾರ್ಥನೆಗೆ ಅಪೇಕ್ಷಿಸುವಾಗ ಒಂದು ನಝ್ರ್ (ದಕ್ಷಿಣೆ) ನೀಡಿರಿ ಎಂದು ಹೇಳಲಾಗುತ್ತಿತ್ತು. ಇದು ಆ ವ್ಯಕ್ತಿಯೊಂದಿಗಿರುವ ಸಂಬಂಧವನ್ನು ವರ್ಧಿಸಲಿಕ್ಕಾಗಿತ್ತು. ಇದಕ್ಕೆ ಸಂಬಂಧಿಸಿ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪದೇ ಪದೇ ಒಂದು ನೀತಿಕಥೆ ಹೇಳುತ್ತಿದ್ದರು. ಒಬ್ಬನ ಮನೆಯ ದಾಖಲೆಪತ್ರ ಕಾಣೆಯಾಗಿತ್ತು. ಅವನು ಒಬ್ಬ ಹಿರಿಯರೊಂದಿಗೆ ಅದರ ಬಗ್ಗೆ ಪ್ರಾರ್ಥಿಸಲು ಹೇಳಿದಾಗ ಆ ಹಿರಿಯ ವ್ಯಕ್ತಿ ಹೇಳಿದರು ನಾನು ದುಆ ಮಾಡುತ್ತೇನೆ ಆದರೆ ನೀನು ಮೊದಲು ನನಗೆ ಸ್ವಲ್ಪ ಹಲ್ವಾ ತಂದುಕೊಂಡು. ವ್ಯಕ್ತಿ ಹಲ್ವ ಖರೀದಿಸಲು ಹೋದನು. ಹಲ್ವ ಮಾರುವವನು ಒಂದು ಕಾಗದದಲ್ಲಿ ಅದನ್ನು ಕಟ್ಟಿಕೊಡಲು ಸಿದ್ಧನಾದಾಗ ಆ ಕಾಗದವನ್ನು ಆ ವ್ಯಕ್ತಿ ನೋಡಿ ಬೊಬ್ಬಿಟ್ಟನು: ಆ ಕಾಗದ ಹರಿಯಬೇಡಿರಿ. ಅದು ನನ್ನ ಮನೆಯ ದಾಖಲೆ ಪತ್ರವಾಗಿದೆ. ಇದಕ್ಕೋಸ್ಕರವೇ ನಾನು ಪ್ರಾರ್ಥನೆ ಮಾಡಿಸಲು ಬಯಸಿದ್ದೆನು ಎಂದು ಹೇಳಿದ.

ಇಂತಹ ಅನೇಕ ನೀತಿಕಥೆಗಳನ್ನು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ. ಒಳಿತಿನಲ್ಲಿ ಒಬ್ಬರು ಇನ್ನೊಬ್ಬರೊಂದಿಗೆ ಸ್ಪರ್ಧಿಸುವ ಬಗ್ಗೆ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಬ್ಬರು ಸಹಾಬಿಗಳಿಗೆ ಸಂಬಂಧಿಸಿ ಒಂದು ಘಟನೆ ಹೀಗೆ ವಿವರಿಸಿದ್ದಾರೆ: ಒಬ್ಬ ಸಹಾಬಿ ತನ್ನ ಕುದುರೆಯನ್ನು ಮಾರಾಟ ಮಾಡಲು ತಂದಾಗ ಇನ್ನೊಬ್ಬ ಸಹಾಬಿ ಅದರ ಬೆಲೆ ಎಷ್ಟೆಂದು ಕೇಳಿದರು. ಮಾರಾಟ ಮಾಡುವ ಸಹಾಬಿ ಅದರ ಬೆಲೆ ಇಷ್ಟೆಂದು ಹೇಳಿದಾಗ ಖರೀದಿ ಮಾಡುವ ಸಹಾಬಿ ಹೇಳಿದರು: ನೀವು ಹೇಳಿದ ಬೆಲೆ ಸರಿಯಲ್ಲ ಅದರ ವಾಸ್ತವಿಕ ಬೆಲೆ ಇಷ್ಟೆಂದು ಹೇಳಿದರು. ಅದು ಮಾರಾಟಗಾರ ಹೇಳಿದುದಕ್ಕಿಂತ ಹೆಚ್ಚಿಗೆಯಾಗಿತ್ತು. ಪ್ರಾಮಾಣಿಕತೆಯ ಈ ಘಟನೆ ಸತ್ಯವಿಶ್ವಾಸಕ್ಕೆ ಸಂಬಂಧಿಸಿದ ಒಂದು ಸಾಮಾನ್ಯ ಘಟನೆ ಆಗಿದೆ. ನಮ್ಮ ತರಬೇತಿಗೆ ಪುಣ್ಯ ನೀಡುವ ಈ ಘಟನೆ ನಮ್ಮ ಸಂತಾನಗಳಿಗೆ ಆದರ್ಶ ತರಬೇತಿ ನೀಡುವಂತಹದಾಗಿದೆ. ಅದು ನಮ್ಮ ಜಮಾಅತಿನ ಅಭಿವೃದ್ಧಿಗೂ ಸಹಾಯಕವಾಗುವುದು ಸತ್ಯವಿಶ್ವಾಸದ ಇಂತಹ ಉನ್ನತ ಮಟ್ಟವನ್ನು ಸ್ಥಾಪಿಸಲು ನಾವು ಪ್ರಯತ್ನ ಮಾಡುವುದು ಆವಶ್ಯಕವಾಗಿದೆ.

ಮತ್ತೆ, ಪ್ರತಿಯೊಬ್ಬ ಅಹ್ಮದಿ ಯಾವಾಗಲೂ ಲಕ್ಷ್ಯ ನೀಡಬೇಕಾದ ಇನ್ನೊಂದು ಮುಖ್ಯ ವಿಷಯವೇನೆಂದರೆ ಎಲ್ಲ ಒಳಿತುಗಳ ಒಡೆಯ

ಅಲ್ಲಾಹನು ಮಾತ್ರ. ಯಾರಿಗಾದರೂ ಸತ್ಯದ ಕಡೆಗೆ ಮಾರ್ಗದರ್ಶನ ನೀಡುವುದು ಅಲ್ಲಾಹನ ಕೆಲಸವಾಗಿದೆ. ಅಲ್ಲಾಹನು ನಮಗೆ ಒಂದು ಕೆಲಸ ವಹಿಸಿಕೊಟ್ಟಿದ್ದಾನೆ– ಅದೆಂದರೆ ಸತ್ಯ ಮಾರ್ಗದರ್ಶನದ ಪ್ರಚಾರ ಮಾಡಿರಿ, ಸಂದೇಶ ತಲಪಿಸಿರಿ ಎಂದು. ಆದರೆ ಜನರಿಗೆ ಮಾರ್ಗದರ್ಶನ ಲಭಿಸುವಂತೆ ಮಾಡುವುದು ಅಲ್ಲಾಹನ ಕೆಲಸವಾಗಿದೆ. ನಮಗೆ ನಮ್ಮ ಶಕ್ತಿ ಸಾಮರ್ಥ್ಯಗಳಿಗೆ ಅನುಸಾರವಾಗಿ ಈ ಕೆಲಸವನ್ನು ಮಾಡಲೇಬೇಕಾಗಿದೆ. ಅದಕ್ಕೆ ಪರಿಣಾಮವನ್ನು ಅಲ್ಲಾಹನೇ ಸ್ವತಃ ದಯಪಾಲಿಸುವನು. ಇಂತಹ ಮನುಷ್ಯ ಅಹ್ಮದಿ ಆದರೆ ನಮ್ಮ ಜಮಾಅತಿಗೆ ಅಭಿವೃದ್ಧಿ ಲಭಿಸುವುದು ಎಂದು ನೀವು ಯಾವತ್ತೂ ಯೋಚಿಸಬೇಡಿರಿ. ನಾವು ಅಲ್ಲಾಹನ ಅನುಗ್ರಹ ಗಳಿಸುವ ಬಗ್ಗೆ ಲಕ್ಷ್ಯ ನೀಡಬೇಕಾದುದು ಆವಶ್ಯಕವಾಗಿದೆ. ನಾವು ಅಲ್ಲಾಹನ ಮೇಲೆ ಭರವಸೆ ಹೊಂದಬೇಕು. ನಾವು ಮಾಡಬೇಕಾದ ಕೆಲಸ ನಾವೇ ಮಾಡಬೇಕು. ನಾವು ಜನರ ಕಡೆಗೆ ನೋಡುವ ಆವಶ್ಯಕತೆ ಇಲ್ಲ. ಆದುದರಿಂದ ನಿಷ್ಠೆಯಲ್ಲೂ ಪ್ರಾಮಾಣಿಕತೆಯಲ್ಲೂ ವರ್ಧಿಸುವ ಜನರನ್ನು ಧಾರ್ಮಿಕ ಅಭಿವೃದ್ಧಿಗೆ ಮುಂದಕ್ಕೆ ಹೆಜ್ಜೆ ಹಾಕುವ ಜನರನ್ನು ಜಮಾಅತಿಗೆ ಅಲ್ಲಾಹನು ದಯಪಾಲಿಸಲಿ ಎಂದು ನಾವು ಪ್ರಾರ್ಥಿಸಬೇಕು.

ಜನರು ದಾರಿ ತಪ್ಪಿ ಹೋಗುವುದರಿಂದ ರಕ್ಷಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗಿದ್ದ ಕಾಳಜಿ ಬಗ್ಗೆ ಒಂದು ಉದಾಹರಣೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸಿದ್ದಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಮೀಪಕ್ಕೆ ಒಬ್ಬ ನಿರಕ್ಷರ ಬಡ ಮಹಿಳೆ ಬಂದು ಹೇಳಿದಳು: ನನ್ನ ಮಗ ಕ್ರೈಸ್ತನಾಗಿದ್ದಾನೆ. ಅವನು ಪುನಃ ಮುಸ್ಲಿಮನಾಗಲು ಪ್ರಾರ್ಥಿಸಿರಿ ಎಂದು ಹೇಳಿದಳು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಅವನನ್ನು ನನ್ನ ಬಳಿಗೆ ಕಳುಹಿಸುತ್ತಾ ಇರಿ. ಅವನು ಅಲ್ಲಾಹನ ಮಾತುಗಳನ್ನು ಆಲಿಸಲಿ ಎಂದು ಹೇಳಿದರು. ಆ ಹುಡುಗ ಕ್ಷಯರೋಗ ಬಾಧಿತನಾಗಿದ್ದನು. ಅವನು ಚಿಕಿತ್ಸೆಗೆ ಖಲೀಫತುಲ್ ಮಸೀಹ್ ಅವ್ವಲ್‌ರ ಬಳಿಗೆ ಬಂದಿದ್ದನು. ಅವನಿಗೆ ಉಪದೇಶ ನೀಡಲಾಯಿತು. ಅವನ ತಾಯಿಯ ಅಪೇಕ್ಷೆಯನ್ನು ಅಲ್ಲಾಹನು ಅಂಗೀಕರಿಸಿದನು. ಅವನು ಪುನಃ ಮುಸ್ಲಿಮನಾದನು. ಆದರೆ ಕೆಲವು ದಿನಗಳ ನಂತರ ಮೃತಪಟ್ಟನು. ಆ ಹುಡುಗನನ್ನು ಇಸ್ಲಾಮ್ ಧರ್ಮಕ್ಕೆ ತರಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಮಾತ್ರ ಸಾಧ್ಯ ಎಂದು ಆ ಮಹಿಳೆ ಯೋಚಿಸಿದ್ದಳು. ಏಕೆಂದರೆ ಇಸ್ಲಾಮ್ ಬಗ್ಗೆ ವಾಸ್ತವಿಕ ನೋವು ಇದ್ದುದು ಅವರಿಗಾಗಿತ್ತು. ವಾಸ್ತವಿಕ ನೋವಿನೊಂದಿಗೆ ಇಸ್ಲಾಮಿನ ಸಂದೇಶ ತಲಪಿಸಲು ಅವರಿಗೆ ಮಾತ್ರ ಸಾಧ್ಯವಿತ್ತು. ಅವರಿಗೆ ಮಾತ್ರ ಅದರ ಬಗ್ಗೆ ಅನ್ಯರು ಒಪ್ಪುವಂತೆ ಮಾಡಲು ಸಾಧ್ಯವಿತ್ತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜನರಿಗೆ ತರಬೇತಿ ನೀಡುವ ಕ್ರಮ ಬಹಳ ಸೂಕ್ಷ್ಮವೂ ವಿಸ್ಮಯಕರವೂ ಆಗಿತ್ತು. ಒಮ್ಮೆ ಒಬ್ಬ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಮೀಪ ಬಂದನು. ಅವನು ಬಡವನಾಗಿದ್ದನು. ತಾನು ರೈಲುಬಂಡಿಯಲ್ಲಿ ಟಿಕೆಟು ಪಡೆಯದೆ ಬಂದುದಾಗಿ ಹೇಳಿದನು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅವನಿಗೆ ಒಂದು ರೂಪಾಯಿ ಕೊಟ್ಟು ಮುಗುಳ್ನಗುತ್ತಾ ಈ ರೀತಿ ಹೇಳಿದರು: ನೀನು ಹಿಂದಿರುಗಿ ಹೋಗುವಾಗ ಆ ರೀತಿ ಮಾಡುವ ಅಗತ್ಯ ಬೀಳಲಾರದು ಎಂದು ನಾನು ಭಾವಿಸುತ್ತೇನೆ ಎಂದು ಹೇಳಿದರು. ಯಾವಾಗಲೂ ಧರ್ಮಬದ್ಧವಾದ ಕೆಲಸ ಮಾಡಬೇಕೆಂದು ಎಂದು ಅವನಿಗೆ ಉಪದೇಶಿಸಿದರು. ಆ ಕಾಲದಲ್ಲಿ ಒಂದು ರೂಪಾಯಿಗೆ ಬಹಳ ಹೆಚ್ಚು ಮೌಲ್ಯವಿತ್ತು.

ಅದೇ ರೀತಿ ಅಹ್ಮದಿಯಾ ಜಮಾಅತಿನ ಜನರು ಯಾವುದಾದರೂ ಕಸಬು ಕಲಿಯಬೇಕೆಂದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬಹಳ ಒತ್ತಿ ಹೇಳುತ್ತಿದ್ದರು. ಅವರು ಒಂದು ಘಟನೆ ಹೀಗೆ ವಿವರಿಸುತ್ತಾರೆ:

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಫಿಜಾ ಎಂಬ ಹುಡುಗ ಇದ್ದನು. ಒಮ್ಮೆ ಕೆಲವು ಅತಿಥಿಗಳು ಬಂದಾಗ ಅವರಿಗಾಗಿ ಚಾ ತಯಾರಿಸಲಾಯಿತು. ಅವರಿಗೆ ಚಾ ತಂದು ಕೊಡಲು ಫಿಜಾನೊಂದಿಗೆ ಹೇಳಿದರು. ಅವನೊಂದಿಗೆ ಚಿರಾಗ್ ಎಂಬ ಹಳೆಯ ನೌಕರ ಸಹ ಇದ್ದನು. ಇಬ್ಬರೂ ಚಾ ತೆಗೆದುಕೊಂಡು ಹೋದಾಗ ಹಳೆಯ ನೌಕರ ಚಿರಾಗ್, ಚಾ ಪಾತ್ರೆಯೊಂದನ್ನು ಖಲೀಫತುಲ್ ಮಸೀಹ್ ಅವ್ವಲ್‌ರಿಗೆ ಕೊಡಲು ಹೋದ. ಆಗ ಫಿಜಾ ಅವನ ಕೈ ಹಿಡಿದು ಹೇಳಿದ: ಏವರ ಹೆಸರು ಹೇಳಿ ಅವರಿಗೆ ಕೊಡಲು ಹಝ್ರತ್ ಸಾಹೇಬರು ಹೇಳಿದ್ದಾರೆ. ಇವರ ಹೆಸರು ಹೇಳಿಲ್ಲ ಎಂದು ಹೇಳಿದನು. ಆ ಹುಡುಗನ ಬುದ್ಧಿಯ ಮಟ್ಟ ಹಾಗಿತ್ತು. ಆದರೆ ಆ ಹುಡುಗನನ್ನು ನಂತರ ಕಟ್ಟಡ ನಿರ್ಮಾಣ ಕೆಲಸಕ್ಕೆ ಸೇರಿಸಿದಾಗ ಅವನು ಉತ್ತಮ ಕಟ್ಟಡ ನಿರ್ಮಾಣ ಕಾರ್ಮಿಕನಾದನು. ಆದುದರಿಂದ ನಿರುದ್ಯೋಗಿಗಳಾಗಿರುವವರು ಸ್ವಲ್ಪ ಮಾತ್ರ ಕಸಬು ಕಲಿತರೆ ಹಣ ಸಂಪಾದಿಸಬಹುದಾಗಿದೆ. ಇಲ್ಲಿಗೆ ಸಹ ಕೆಲವರು ಬಂದು ಏನೂ ಕೆಲಸ ಮಾಡದೆ ನಿರುದ್ಯೋಗಿಗಳಾಗಿದ್ದಾರೆ. ಅವರು ಯಾವುದಾದರೂ ಕಸಬು ಕಲಿತು ಸಂಪಾದಿಸಬಹುದಾಗಿದೆ. ಅವರು ಸಾರ್ವಜನಿಕ ಸೇವೆ (ಖಿದ್‌ಮತೆ ಖಲ್‌ಖ್) ಸಹ ಮಾಡಬಹುದಾಗಿದೆ.

ಅಲ್ಲಾಹನ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗಿದ್ದ ಅಭಿಮಾನದ ಬಗ್ಗೆ ಒಂದು ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: ಇಲ್ಲಿ ಒಬ್ಬ ವ್ಯಕ್ತಿ ಇದ್ದರು. ಅನಂತರ ಅವರು ಬಹಳ ನಿಷ್ಠಾವಂತ ಅಹ್ಮದಿಯಾದರು. ಅವರೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನಿಕಟ ಸಂಬಂಧವಿತ್ತು. ಆದರೆ ಅಹ್ಮದಿಯಾಗುವ ಮೊದಲು ಅವರೊಂದಿಗೆ ಇಪ್ಪತ್ತು ವರ್ಷಗಳ ಕಾಲ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಸಿಟ್ಟಾಗಿದ್ದರು. ಇದಕ್ಕೆ ಕಾರಣವೇನೆಂದರೆ ಅವರ ಒಬ್ಬ ಮಗ ಮೃತನಾದಾಗ ಅವರ ಮನೆಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಸಹೋದರನೊಂದಿಗೆ ಹೋದಾಗ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹೋದರನನ್ನು ತಬ್ಬಿಕೊಂಡು ಅಳುತ್ತಾ ಹೇಳಿದ್ದರು: ಅಲ್ಲಾಹನು ನನ್ನ ಮೇಲೆ ಬಹಳ ಅನ್ಯಾಯ ಮಾಡಿದ್ದಾನೆ ಎಂದು. (ನಊಧುಬಿಲ್ಲಾಹ್) ಈ ಮಾತು ಆಲಿಸಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವರ ಬಗ್ಗೆ ಎಂತಹ ತಾತ್ಸಾರ ತಲೆ ದೋರಿತ್ತೆಂದರೆ ಅವರ ಮುಖ ನೋಡಲು ಸಹ ಇಷ್ಟಪಟ್ಟಿರಲಿಲ್ಲ. ಅನಂತರ ಆ ವ್ಯಕ್ತಿ ಅಲ್ಲಾಹನ ಅನುಗ್ರಹದಿಂದ ತನ್ನ ಅಜ್ಞಾನದಿಂದ ಹೊರಗೆ ಬಂದರು ಮತ್ತು ಅಹ್ಮದಿಯಾದರು.

ಅಲ್ಲಾಹನ ಅಸ್ತಿತ್ವದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಘಟನೆ ಹೀಗೆ ವಿವರಿಸಿದ್ದಾರೆ: ಹಝ್ರತ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹೇಬರ ಜೊತೆಗೆ ಒಬ್ಬ ನಾಸ್ತಿಕ ವಿದ್ಯಾರ್ಥಿ ಕಲಿಯುತ್ತಿದ್ದನು. ಒಮ್ಮೆ ಭೂಕಂಪ ಸಂಭವಿಸಿದಾಗ ಪಕ್ಕನೆ ಅವನ ಬಾಯಿಯಿಂದ ''ರಾಮ್, ರಾಮ್'' ಎಂಬ ಶಬ್ದ ಹೊರಟಿತು. ಅವನು ಹಿಂದುವಾಗಿದ್ದನು. ಅನಂತರ ನಾಸ್ತಿಕನಾಗಿದ್ದನು. ಮೀರ್ ಸಾಹೇಬರು ಅವನೊಂದಿಗೆ, ನೀನು ನಾಸ್ತಿಕನಾಗಿದ್ದು ಸಹ ಹೀಗೇಕೆ ಹೇಳಿದೆ ಎಂದು ಕೇಳಿದಾಗ ಅವನು ಹೇಳಿದನು: ನನ್ನಿಂದ ತಪ್ಪಾಯಿತು. ನನಗೆ ತಿಳಿಯದೆ ನಾನು ಹಾಗೆ ಹೇಳಿ ಬಿಟ್ಟಿದ್ದೆ ಎಂದನು. ಆದುದರಿಂದ ಇದು ಅಲ್ಲಾಹನ ಅಸ್ತಿತ್ವಕ್ಕೆ ಬಹಳ ದೊಡ್ಡ ಒಂದು ಸಾಕ್ಷ್ಯಾಧಾರವಾಗಿದೆ. ಎಲ್ಲ ಜನಾಂಗಗಳಲ್ಲೂ ದೇವನ ಕಲ್ಪನೆ ಇದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನಿಂದ ದೊರೆತ ಸಹಾಯದ ಬಗ್ಗೆ ಅವರ ಸ್ಥಿತಿಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಒಂದು ನೋಟ್‌ಬುಕ್‌ನಲ್ಲಿ ಹೀಗೆ ಬರೆದಿದ್ದಾರೆ– 'ಓ ಅಲ್ಲಾಹ್ ನಾನು ನಿನ್ನನ್ನು ಹೇಗೆ ಬಿಟ್ಟುಬಿಡಲಿ. ನನ್ನ ಯಾವ ಸ್ನೇಹಿತರು ನನಗೆ ಯಾವ ಸಹಾಯವನ್ನೂ ನೀಡದೆ ಇದ್ದಾಗ ನೀನು ನನಗೆ ಸಮಾಧಾನ ನೀಡಿದೆ ಮತ್ತು ಸಹಾಯ ನೀಡಿದೆ.' ಇದರಿಂದ ನಮಗೆ ಲಭಿಸುವ ಪಾಠವೇನೆಂದರೆ, ಪ್ರತಿಯೊಬ್ಬ ಅಹ್ಮದಿಯ ಸ್ವಭಾವದ ಗುಣಮಟ್ಟ ಉತ್ತಮವೂ ಉನ್ನತವೂ ಆಗಿರಬೇಕು. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪದೇ ಪದೇ ಉಪದೇಶಿಸುತ್ತಿದ್ದರು. ಅವರು ಶತ್ರುಗಳೊಂದಿಗೆ ಸಹ ಉತ್ತಮವಾಗಿ ವರ್ತಿಸುತ್ತಿದ್ದರು. ಒಂದು ಘಟನೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ, ಒಮ್ಮೆ ಅವರ ಓರ್ವ ಶತ್ರುವಿನ ಪತ್ನಿ ಕಠಿಣ ರೋಗ ಬಾಧಿತೆಯಾಗಿದ್ದಳು. ಆ ಶತ್ರು ಹಿಂದುವಾಗಿದ್ದನು. ಆಕೆಗೆ ಚಿಕಿತ್ಸೆಗೆ ಕಸ್ತೂರಿಯ ಆವಶ್ಯಕತೆ ಇತ್ತು. ಅವನಿಗೆ ಎಲ್ಲಿಯೂ ಕಸ್ತೂರಿ ಸಿಗಲಿಲ್ಲ. ಆ ಶತ್ರು ನಾಚಿಕೆ ಪಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಳಿಗೆ ಬಂದು ಕಸ್ತೂರಿ ಬೇಕೆಂದು ಹೇಳಿದನು. ಅವನಿಗೆ ಆವಶ್ಯಕವಾಗಿದ್ದುದು ಸ್ವಲ್ಪ ಕಸ್ತೂರಿ ಆಗಿದ್ದರೂ ಒಂದು ಶೀಷೆ ತುಂಬ ಕಸ್ತೂರಿ ತಂದು ಆತನಿಗೆ ಕೊಟ್ಟು ಹೇಳಿದರು: ನಿಮ್ಮ ಪತ್ನಿಗೆ ಕಾಯಿಲೆ ಉಲ್ಬಣಿಸಿದೆ ನೀವು ಇದನ್ನೆಲ್ಲಾ ತೆಗೆದುಕೊಂಡು ಹೋಗಿರಿ ಎಂದು ಹೇಳಿದರು.

ಹಿಂಸಾಚಾರ ಉತ್ತೇಜಿಸುವ ವಿರುದ್ಧ ನೀಡಲಾದ ಉಪದೇಶದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದರು: ತಾಊನ್ (ಪ್ಲೇಗ್) ತಅನ್ ಎಂಬ ಶಬ್ದದಿಂದ ಬಂದಿದೆ. ತಅನ್ ಎಂದರೆ ಈಟಿಯಿಂದ ಚುಚ್ಚುವುದು ಎಂದಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶತ್ರುಗಳ ವಿರುದ್ಧ ಕ್ರೋಧ ಪ್ರಕಟಿಸಿದ ಅಲ್ಲಾಹನು ಈಗಲೂ ಇದ್ದಾನೆ. ಅವನು ಈಗ ಸಹ ತನ್ನ ಶಕ್ತಿ ಪ್ರದರ್ಶನ ಮಾಡುವನು. ಅವನು ಖಂಡಿತವಾಗಿಯೂ ಸುಮ್ಮನಿರಲಾರನು. ನಾವು ಮೌನವಾಗಿರುವೆವು. ತಮ್ಮ ಆತ್ಮ ನಿಯಂತ್ರಣ ಮಾಡಲು ಜಮಾಅತಿಗೆ ಹೇಳುವೆವು. ಎಲ್ಲ ವಿಧಗಳ ಹಿಂಸಾಚಾರಗಳನ್ನು ಸಹಿಸಿಯೂ ಶಾಂತಿಯನ್ನೇ ಬಯಸುವ ಒಂದು ಜಮಾಅತ್ ಲೋಕದಲ್ಲಿದೆ ಎಂದು ತೋರಿಸಿ ಕೊಡುವೆವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರಾರ್ಥಿಸುವಾಗ ಅಳು ಬರುವುದಿಲ್ಲ ಎಂದು ಯಾರಾದರೂ ಭಾವಿಸುವುದಾದರೆ ಅಂಥವನು ಕೃತಕವಾಗಿಯಾದರೂ ಅಳು ಬರಿಸಲು ಪ್ರಯತ್ನಿಸಬೇಕು. ಆಗ ವಾಸ್ತವಿಕ ಅಳು ಬರುವುದು. ನಾವು ಕೆಲವು ವಿಷಯಗಳಲ್ಲಿ ಜಯಗಳಿಸದೆ ಇರುವುದು ಮತ್ತು ಶತ್ರುಗಳಿಂದ ಆವರಿಸಲ್ಪಡುವುದಕ್ಕೆ ಕಾರಣ ನಮ್ಮವರಲ್ಲಿ ಒಂದು ವಿಭಾಗ ಪ್ರಾರ್ಥನೆ ಬಗ್ಗೆ ಉದಾಸೀನರಾಗಿರುವುದಾಗಿದೆ. (ಈಗ ಸಹ ಅದೇ ಸ್ಥಿತಿ ಇದೆ.) ಕೆಲವರಿಗೆ ಪ್ರಾರ್ಥನೆ ಮಾಡಲು ತಿಳಿದಿಲ್ಲ. ದುಆ (ಪ್ರಾರ್ಥನೆ) ಮೃತ್ಯು ಹೊಂದುವ ಹಾಗಿದೆ. ತನಗೆ ಒಂದು ಕೆಲಸ ಮಾಡಲು ಸಾಧ್ಯವಿದೆ ಎಂದು ಭಾವಿಸುವವನು ಇನ್ನೊಬ್ಬನನ್ನು ಸಹಾಯಕ್ಕೆ ಕರೆಯುವನೇ? ಆದುದರಿಂದ ತನ್ನನ್ನು ನಿಸ್ಸಹಾಯಕನೆಂದು ಗ್ರಹಿಸುವವನೇ ಅಲ್ಲಾಹನನ್ನು ಬೇಡಿಕೊಳ್ಳಬಲ್ಲನು. ಅಲ್ಲಾಹನು ಹೇಳುತ್ತಾನೆ: ಮನುಷ್ಯನು ನನ್ನ ಮಾರ್ಗದಲ್ಲಿ ಮೃತ್ಯುವನ್ನು ಸ್ವೀಕರಿಸುವ ತನಕ ಪ್ರಾರ್ಥನೆ ಅಂಗೀಕರಿಸಲ್ಪಡಲಾರದು. ತನ್ನನ್ನು ಸಂಪೂರ್ಣವಾಗಿ ನಿಸ್ಸಹಾಯಕನೆಂದು ಗಣಿಸುವಾಗ ಮಾತ್ರ ಪ್ರಾರ್ಥನೆ ಅಂಗೀಕರಿಸಲ್ಪಡುವುದು. ಇಂತಹ ಸ್ಥಿತಿ ಹೊಂದುವವನೇ ಜಯಗಳಿಸುವನು. ಅವನ ಪ್ರಾರ್ಥನೆ ಅಂಗೀಕರಿಸಲ್ಪಡುವುದು.

ನಾವು ನಮ್ಮೊಳಗೆ ಉತ್ತಮ ಸ್ವಭಾವ ಗುಣದ ಉನ್ನತ ಮಟ್ಟ ಸ್ಥಾಪಿಸುವಂತೆ ಅಲ್ಲಾಹನು ನಮಗೆ ಭಾಗ್ಯ ದಯಪಾಲಿಸಲಿ. ನಾವು ಆರಾಧನೆಯಲ್ಲೂ ಉನ್ನತ ಮಟ್ಟ ಸ್ಥಾಪಿಸುವವರಾಗೋಣ. ಅಲ್ಲಾಹನು ನಮಗೆ ಅಂಗೀಕಾರಾರ್ಹ ಪ್ರಾರ್ಥನೆಗಳನ್ನು ಮಾಡುವ ಭಾಗ್ಯ ದಯಪಾಲಿಸಲಿ. ಅವನ ಬಗ್ಗೆ ನಮ್ಮ ಕರ್ತವ್ಯಗಳನ್ನು ಈಡೇರಿಸುವವರಾಗಿ ನಮ್ಮನ್ನು ಮಾಡಲಿ – ಆಮೀನ್.

–––––––––––––––*****–––––––––––––


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 30-10-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email:*** *khutuba.kannada@gmail.com*



**You can find all the Sermons archived at**: www.alislam.org/friday-sermon